ಜಾಹೀರಾತು ಸಂ.383/ಮಾ.ಸಂ./ಅಧಿಕಾರೇತರರು /25-26 ದಿನಾಂಕ :15.10.2025

**ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್**

**(ರಕ್ಷಣಾ ಮಂತ್ರಾಲಯದ ಅಧೀನ ಭಾರತ ಸರ್ಕಾರದ ಒಂದು ಉದ್ಯಮ)**

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಸಂಸ್ಥೆಯ ಬೆಂಗಳೂರು ಘಟಕಕ್ಕೆ ಖಾಯಂ ಆಧಾರದ ಮೇಲೆ ಕೆಳಕಂಡ ಸಿಬ್ಬಂದಿಗಳ ಅವಶ್ಯಕತೆ ಇದೆ.

## 1.0 ಹುದ್ದೆಗಳು, ಕನಿಷ್ಠ ಅರ್ಹತೆ ಮಾನದಂಡ ಮತ್ತು ವೇತನ ಶ್ರೇಣಿಯ ವಿವರಗಳು –

| ಕ್ರ. ಸಂ. | ಹುದ್ದೆ | ವಿದ್ಯಾರ್ಹತೆ | ವೃತ್ತಿ / ವಿಷಯ | ಹುದ್ದೆಗಳ ಸಂಖ್ಯೆ | ಮೀಸಲಾತಿ ವಿಧ | ವೇತನ ವರ್ಗ / ಬಡ್ತಿಹಾದಿ / ವೇತನ ಶ್ರೇಣಿ |
|---|---|---|---|---|---|---|
| (1) | (2) | (3) | (4) | (5) | (6) | (7) |
| 1 | ಎಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿ (ಇ ಎ ಟಿ) * | ಮಾನ್ಯತೆ ಪಡೆದ ಸಂಸ್ಥೆಯಿಂದ 03 ವರ್ಷಗಳು ಎಂಜಿನಿಯರಿಂಗ್ ನಲ್ಲಿ ಡಿಪ್ಲೋಮಾ | ಎಲೆಕ್ಟ್ರಾನಿಕ್ಸ್ | 40 | ಸಾಮಾನ್ಯ–32<br>ಇ. ಡಬ್ಲ್ಯು.ಎಸ್–08<br>ಇ.ಹಿ.ವ.- 22<br>ಪ.ಜಾ. -13<br>ಪ.ವ. - 05 | ವೇತನ ವರ್ಗ–VII / ಬಡ್ತಿ ಹಾದಿ– VI ವೇತನ ಶ್ರೇಣಿ ರೂ.24,500 - 3%- ರೂ.90,000/- + ಸ್ವೀಕಾರಾರ್ಹ ಭತ್ಯೆಗಳು |
| | | | ಮೆಕ್ಯಾನಿಕಲ್ | 29 | | |
| | | | ಕಂಪ್ಯೂಟರ್ ಸೈನ್ಸ್ | 05 | | |
| | | | ಎಲೆಕ್ಟ್ರಿಕಲ್ | 06 | | |
| | | | **ಒಟ್ಟು** | **80** | | |
| 2 | ತಂತ್ರಜ್ಞ– ಸಿ | ಎಸ್ ಎಸ್ ಎಲ್ ಸಿ + ಐ ಟಿ ಐ + 01 ವರ್ಷ ಅಪ್ರೆಂಟಿಸ್ಶಿಪ್ ಅಥವಾ ಎಸ್ ಎಸ್ ಎಲ್ ಸಿ + 03 ವರ್ಷ ರಾಷ್ಟ್ರೀಯ ಅಪ್ರೆಂಟಿಸ್ ಶಿಪ್ ಪ್ರಮಾಣಪತ್ರ ಕೋರ್ಸ್ | ಎಲೆಕ್ಟ್ರಾನಿಕ್ ಮೆಕ್ಯಾನಿಕ್ | 46 | ಸಾಮಾನ್ಯ– 33<br>ಇ.ಡಬ್ಲ್ಯು.ಎಸ್–08<br>ಇ.ಹಿ.ವ–22<br>ಪ.ಜಾ– 13<br>ಪ.ಪಂ.- 06 | ವೇತನ ವರ್ಗ–IV / ಬಡ್ತಿ ಹಾದಿ– V ವೇತನ ಶ್ರೇಣಿ ರೂ.21,500 - 3%- ರೂ.82,000/- + ಸ್ವೀಕಾರಾರ್ಹ ಭತ್ಯೆಗಳು |
| | | | ಫಿಟ್ಟರ್ | 26 | | |
| | | | ಮೆಶಿನಿಸ್ಟ್ | 04 | | |
| | | | ಎಲೆಕ್ಟ್ರಿಶಿಯನ್ | 06 | | |
| | | | **ಒಟ್ಟು** | **82** | | |
| | | | **ಒಟ್ಟು ಮೊತ್ತ** | **162** | | |

*ಇಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿಗಳು (ಇ.ಎ.ಟಿ) ಆರು ತಿಂಗಳ ಆರಂಭಿಕ ಅವಧಿಗೆ ತರಬೇತಿ ಪಡೆಯಲಿದ್ದು, ಈ ಅವಧಿಯಲ್ಲಿ ಅವರಿಗೆ ರೂ.24,000/-ರಂತೆ ಪ್ರತಿ ತಿಂಗಳು ಸ್ಟೈಪೆಂಡ್ ಪಾವತಿಸಲಾಗುವುದು. ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಮತ್ತು ಶ್ರೇಣೀಕರಣ ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನು ಈ ಮೇಲೆ ಸೂಚಿಸಲಾದ ನಿಯತ ವೇತನ ಶ್ರೇಣಿಯಲ್ಲಿ ನೇಮಕಮಾಡಲಾಗುವುದು.

**ಗಮನಿಸಿ –** ಪಿ ಡಬ್ಲ್ಯೂಬಿ ಡಿ ಗಾಗಿ ಮೀಸಲಾತಿ ಸರ್ಕಾರಿ ಮಾರ್ಗಸೂಚಿಗಳನುಸಾರ ಇರುತ್ತದೆ.

**ಉಪಯೋಗಿಸಲಾದ ಸಂಕ್ಷೇಪಗಳು –** ಸಾಮಾನ್ಯ – ಮೀಸಲಾತಿರಹಿತ, ಇ.ಹಿ.ವ (ಎನ್ ಸಿ ಎಲ್) – ಇತರೆ ಹಿಂದುಳಿದ ವರ್ಗಗಳು ( ಮೇಲ್ಪದರ ವರ್ಗ ರಹಿತ), ಪ.ಜಾ. – ಪರಿಶಿಷ್ಟ ಜಾತಿ, ಪ.ಪಂ.– ಪರಿಶಿಷ್ಟ ಪಂಗಡ, ಇ ಡಬ್ಲ್ಯೂ ಎಸ್ – ಆರ್ಥಿಕವಾಗಿ ದುರ್ಬಲ ವರ್ಗ, ಪಿ ಡಬ್ಲ್ಯೂಬಿಡಿ – ಬೆಂಚ್ ಮಾರ್ಕ್ ಅಸಮರ್ಥನೀಯ ವ್ಯಕ್ತಿ

## 2.0 ಅರ್ಹತೆ ಮಾನದಂಡ:

**2.1 ರಾಷ್ಟ್ರೀಯತೆ : ಅಭ್ಯರ್ಥಿ ಭಾರತದ ಪ್ರಜೆಯಾಗಿರಬೇಕು**

2.2 ವಯೋಮಿತಿ (01.10.2025 ರಂತೆ) :

| ಕ್ರ.ಸಂ. | ಹುದ್ದೆ | ಕನಿಷ್ಠ ವಯೋಮಿತಿ | ಗರಿಷ್ಠ ವಯೋಮಿತಿ |
|---|---|---|---|
| 1. | ಇಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿ (ಇ ಎ ಟಿ) | 18 ವರ್ಷ | 28 ವರ್ಷ |
| 2. | ತಂತ್ರಜ್ಞ – ಸಿ | 18 ವರ್ಷ | 28 ವರ್ಷ |

**ಮೇಲೆಸೂಚಿಸಿದ ಗರಿಷ್ಠ ವಯೋಮಿತಿಯು ಸಾಮಾನ್ಯ ಮತ್ತು ಇ ಡಬ್ಲ್ಯೂ ಎಸ್ ವರ್ಗದ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ**

2.3 **ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ:**

| ಕ್ರ.ಸಂ. | ವರ್ಗ | ವಯೋಮಿತಿಯಲ್ಲಿ ಸಡಿಲಿಕೆ |
|---|---|---|
| 1 | ಇತರೆ ಹಿಂದುಳಿದ ವರ್ಗ (ಮೇಲ್ಪದರ ವರ್ಗ ರಹಿತ) | 3 ವರ್ಷ |
| 2 | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ | 5 ವರ್ಷ |
| 3 | ಕನಿಷ್ಠ 40% ಅಂಕವಿಕಲತೆಯುಳ್ಳ (ಪಿ.ಡಬ್ಲ್ಯುಬಿಡಿ) ವ್ಯಕ್ತಿ | 10 ವರ್ಷ |

a) ಮೆಟ್ರಿಕ್ಯುಲೇಶನ್ / ಹಿರಿಯ ಮಾಧ್ಯಮಿಕದಲ್ಲಿ ಉತ್ತೀರ್ಣಕ್ಕಾಗಿ ಮಾಧ್ಯಮಿಕ ಶಿಕ್ಷಣ ಮಂಡಲಿಯಿಂದ ನೀಡಲಾದ ಪ್ರಮಾಣಪತ್ರದಲ್ಲಿ ಸೂಚಿಸಿದ ಜನ್ಮ ದಿನಾಂಕವನ್ನು ಮಾತ್ರ ವಯಸ್ಸಿನ ದಾಖಾಲೆಯಾಗಿ ಸ್ವೀಕರಿಸಲಾಗುವುದು. ಒಂದು ವೇಳೆ ಮೆಟ್ರಿಕ್ಯುಲೇಶನ್ / ಹಿರಿಯ ಮಾಧ್ಯಮಿಕ ಶಾಲಾ ಪ್ರಮಾಣಪತ್ರದಲ್ಲಿ ಜನ್ಮ ದಿನಾಂಕವು ಇಲ್ಲವಾದಲ್ಲಿ ಸಕ್ಷಮ ಪ್ರಾಧಿಕಾರರಿಂದ ಜಾರಿಗೊಳಿಸಿದ ಜನ್ಮ ಪ್ರಮಾಣಪತ್ರವನ್ನು ಪರಿಗಣಿಸಲಾಗುವುದು.

b) ವಯೋಮಿತಿಯಲ್ಲಿ ಸಡಿಲಿಕೆಯನ್ನು ಬಯಸುವ ಅಭ್ಯರ್ಥಿಗಳು ಅಗತ್ಯ ಪ್ರಮಾಣ ಪತ್ರ (ಗಳ) ನ್ನು ಅರ್ಜಿಯೊಂದಿಗೆ ಲಗತ್ತಿಸಿ, ಪರಿಶೀಲನೆ ಪ್ರಕ್ರಿಯೆಯ ಹಂತದಲ್ಲಿ ಮೂಲ ಪ್ರತಿಯನ್ನು ಸಲ್ಲಿಸಬೇಕು.

c) ಇ.ಡಬ್ಲ್ಯು.ಎಸ್/ ಜಾತಿ/ ಅಂಗವಿಕಲತೆ ಪ್ರಮಾಣ ಪತ್ರವು ಕಡ್ಡಾಯವಾಗಿ ಬಿ ಇ ಎಲ್ ಜಾಲತಾಣದಲ್ಲಿ ಲಭ್ಯವಿರುವ ನಮೂನೆಯಲ್ಲೇ ಇರಬೇಕು, ವಿಫಲವಾದಲ್ಲಿ ಅಭ್ಯರ್ಥಿಗಳನ್ನು 'ಸಾಮಾನ್ಯ' ವರ್ಗದ ಅಡಿಯಲ್ಲಿ, ಅವರು ಸಾಮಾನ್ಯ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಇತರೆ ಎಲ್ಲ ಮಾನದಂಡಗಳನ್ನು ಪೂರೈಸಿದ್ದಲ್ಲಿ ಮಾತ್ರ ಪರಿಗಣಿಸಲಾಗುವುದು.

d) ದಿನಾಂಕ 01.10.2024 ರಂದು ಅಥವಾ ಅದರ ನಂತರ ಸಕ್ಷಮ ಪ್ರಾಧಿಕಾರರಿಂದ ಜಾರಿಗೊಳಿಸಿದ "ಕೇಂದ್ರ ಸರ್ಕಾರ ಹುದ್ದೆಗಳಲ್ಲಿ ಉದ್ಯೋಗ" ಕ್ಕಾಗಿ ಭಾರತ ಸರ್ಕಾದ ಮೂಲಕ ನಿಗದಿಪಡಿಸಿದ ನಮೂನೆಯಲ್ಲಿ ಘೋಷಣೆ ಮಾಡುವುದರೊಂದಿಗೆ ಇ.ಹಿ.ವ. (ಎನ್.ಸಿ.ಎಲ್.) ಪ್ರಮಾಣಪತ್ರದ ಪ್ರಮಾಣಿತ ಪ್ರತಿಯನ್ನು ದಾಖಲೆ ಪರಿಶೀಲನೆ ಸಮಯದಲ್ಲಿ ಸಲ್ಲಿಸುವ ಆಧಾರದ ಮೇಲೆ **ಇ.ಹಿ.ವ. ಮೇಲ್ಪದರ ವರ್ಗ ರಹಿತ ( ಎನ್ ಸಿ ಎಲ್) ಅಭ್ಯರ್ಥಿಗಳಿಗೆ ಮೀಸಲಾತಿ / ಸಡಿಲಿಕೆ / ರಿಯಾಯಿತಿ ಇರುತ್ತದೆ.** ಆದಾಯ ಪ್ರಮಾಣಪತ್ರವನ್ನು ಇ.ಹಿ.ವ. ಪ್ರಮಾಣಪತ್ರವನ್ನಾಗಿ ಪರಿಗಣಿಸಲಾಗುವುದಿಲ್ಲ. ( ನಿಗದಿತ ನಮೂನೆಗಳನ್ನು www.bel-india.in ವೆಬ್ ಸೈಟ್ ನಲ್ಲಿ ಲಭಿಸಲು ವ್ಯವಸ್ಥೆ ಮಾಡಲಾಗಿದೆ.)

e) ಸಕ್ಷಮ ಪ್ರಾಧಿಕಾರಿಯಿಂದ*** 2024-2025 ಸಾಲಿಗೆ ಜಾರಿಗೊಳಿಸಿದ ಇ ಡಬ್ಲೂ ಎಸ್ ಪ್ರಮಾಣಪತ್ರವನ್ನು ಪರಿಗಣಿಸಲಾಗುವುದು. ( ನಿಗದಿತ ನಮೂನೆಗಳನ್ನು www.bel-india.in ವೆಬ್ ಸೈಟ್ ನಲ್ಲಿ ಲಭಿಸಲು ವ್ಯವಸ್ಥೆ ಮಾಡಲಾಗಿದೆ.)

f) ಒಮ್ಮೆ ವರ್ಗವನ್ನು ಆನ್ ಲೈನ್ ಅರ್ಜಿಯಲ್ಲಿ ಘೋಷಿಸಿದ ನಂತರ ( ಸಾಮಾನ್ಯ / ಪ.ಜಾ./ ಪ.ಪಂ./ ಇ.ಹಿ.ವ. / ಪಿ ಡಬ್ಲೂ ಬಿ ಡಿ / ಮಾಜಿ ಸೈನಿಕರು ) ವರ್ಗದ ಬದಲಾವಣೆಗಾಗಿ ಕೋರಿಕೆಯನ್ನು ಅನುಮತಿಸಲಾಗುವುದಿಲ್ಲ.

g) ಕನಿಷ್ಠ 40% ಅಂಗವೈಕಲ್ಯ ಹೊಂದಿರುವ ಅಸಮರ್ಥನೀಯ ವ್ಯಕ್ತಿ (ಪಿ.ಡಬ್ಲ್ಯು.ಬಿಡಿ) ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ 10 ವರ್ಷಗಳ ಸಡಿಲಿಕೆ ಸೇರಿದ್ದಂತೆ ಮೇಲೆ ತಿಳಿಸಿದ ಪ.ಜಾ./ಪ.ಪಂ./ ಇ.ಹಿ.ವ (ಎನ್ ಸಿ ಎಲ್) ವಯೋಮಿತಿಯ ಸಡಿಲಿಕೆಯು ಕೂಡ ಅನ್ವಯವಾಗುತ್ತದೆ.

h) ಮಾಜಿ ಸೈನಿಕರಿಗೆ ಸರ್ಕಾರ ಮಾರ್ಗದರ್ಶನಗಳ ಅನುಸಾರ ವಯೋಮಿತಿಯಲ್ಲಿ ಸಡಿಲಿಕೆಯು ಅನ್ವಯವಾಗುವುದು. ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಿಯಿಂದ ಸಹಿ ಮಾಡಲಾದ ನಿಗದಿತ ನಮೂನೆ ಅನುಬಂಧ –೩ ರನ್ನು ಸಲ್ಲಿಸತಕ್ಕದ್ದು.

## 3.0 ಶೈಕ್ಷಣಿಕ ವಿದ್ಯಾರ್ಹತೆ:

### 3.1 ಎಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿ–

a) ಅಭ್ಯರ್ಥಿಗಳು ಮಾನ್ಯತೆ ಪಡೆದ ಸಂಸ್ಥೆಯಿಂದ ಸಂಗತ ವಿಷಯದಲ್ಲಿ ಮೂರು ವರ್ಷಗಳ ಎಂಜಿನಿಯರಿಂಗ್ ನಲ್ಲಿ ಡಿಪ್ಲೊಮಾ ಪೂರ್ಣಗೊಳಿಸಿರಬೇಕು.

b) ಅಭ್ಯರ್ಥಿಗಳು ತಾತ್ಕಾಲಿಕ / ಅಂತಿಮ / ಡಿಪ್ಲೊಮಾ ಪ್ರಮಾಣಪತ್ರವನ್ನು ಕೋರ್ಸ್ ನ ಪೂರ್ಣಗೊಳಿಸಿರುವ ಸಾಕ್ಷ್ಯವಾಗಿ ಮತ್ತು ಶೇಕಡವಾರು ಅಂಕಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

c) ಒಂದು ವೇಳೆ ವಿಶ್ವವಿದ್ಯಾಲಯ / ಸಂಸ್ಥೆ ಅಥವಾ ಕಾಲೇಜು ಎಸ್ ಜಿಪಿಎ / ಸಿಜಿಪಿಎ/ಒಜಿಪಿಎ/ಡಿಜಿಪಿಎ ಅಥವಾ ಲೆಟರ್ ಗ್ರೇಡ್ ಅನ್ನು ಅನುಸರಿಸುತ್ತಿದ್ದರೆ, ಎಲ್ಲೆಲ್ಲಿ ಅನುವಯಿಸುವುದೋ, ಅದನ್ನು ಅಭ್ಯರ್ಥಿಯು ವಿಶ್ವವಿದ್ಯಲಯ / ಸಂಸ್ಥೆ / ಕಾಲೇಜಿನಿಂದ ಜಾರಿಗೊಳಿಸಿದ ಶೇಕಡವಾರು (%) ಅನ್ನು ಸಾಕ್ಷ್ಯವಾಗಿ ಸಲ್ಲಿಸುವುದು ಕಡ್ಡಾಯವಾಗಿದೆ.

### 3.2 ತಂತ್ರಜ್ಞ 'ಸಿ'

a) ಮಾನ್ಯತೆ ಪಡೆದ ಸಂಸ್ಥೆಯಿಂದ ಎಸ್ ಎಸ್ ಎಲ್ ಸಿ + ಸಂಗತ ವೃತ್ತಿಯಲ್ಲಿ ಐಟಿಐ ಪೂರ್ಣಗೊಳಿಸಿರಬೇಕು ಮತ್ತು ರಾಷ್ಟ್ರೀಯ ಅಪ್ರೆಂಟಿಸ್ ಶಿಪ್ ಪ್ರಮಾಣೀಕರಣದೊಂದಿಗೆ ಒಂದು ವರ್ಷ ಶಿಶ್ಯವೃತ್ತಿ ತರಬೇತಿ ಅಥವಾ ಎಸ್ ಎಸ್ ಎಲ್ ಸಿ + ಸಂಗತ ವೃತ್ತಿಯಲ್ಲಿ ೩ ವರ್ಷಗಳು ರಾಷ್ಟ್ರೀಯ ಅಪ್ರೆಂಟಿಸ್ ಶಿಪ್ ಪ್ರಮಾಣಪತ್ರ ಅಧ್ಯಯನ.

b) ಮೇಲೆ ಸೂಚಿಸಿದ ನಿರ್ಧಾರಿತ ವಿದ್ಯಾರ್ಹತೆಯನ್ನು ಮಾತ್ರ ಪರಿಗಣಿಸಲಾಗುವುದು. ಮೇಲೆ ನಿರ್ಧರಿಸಿದ ವಿದ್ಯಾರ್ಹತೆಗೆ ಸಮನಾರ್ಥಕ ವಿದ್ಯಾರ್ಹತೆ ಹೊಂದಿದ್ದರೆ ಅದನ್ನು ಪರಿಗಣಿಸಲಾಗುವುದಿಲ್ಲ.

c) ಅಭ್ಯರ್ಥಿಗಳು ತಾತ್ಕಾಲಿಕ / ಅಂತಿಮ / ಐ ಟಿ ಐ / ಅಪ್ರೆಂಟಿಸ್ ಪ್ರಮಾಣಪತ್ರವನ್ನು ಕೋರ್ಸ್ ನ ಪೂರ್ಣಗೊಳಿಸಿರುವ ಸಾಕ್ಷ್ಯವಾಗಿ ಮತ್ತು ಶೇಕಡವಾರು ಅಂಕಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

**3.3 ಕನಿಷ್ಠ ಶೇಕಡವಾರು ಅಂಕಗಳು :**

| ಕ್ರ.ಸಂ. | ಹುದ್ದೆ | ಕನಿಷ್ಠ ಶೇಕಡವಾರು ಅಂಕಗಳು (ಒಟ್ಟಾರೆ) |
|---|---|---|
| 1. | ಇಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿ (ಇ ಎ ಟಿ) | ಸಾಮಾನ್ಯ / ಇಡಬ್ಲ್ಯೂ ಎಸ್ / ಇ.ಹಿ.ವ (ಎನ್ ಸಿ ಎಲ್) – 60%, ಪ.ಜಾ./ ಪ.ಪಂ./ ಪಿಡಬ್ಲ್ಯೂಬಿಡಿ– 50% |
| 2. | ತಂತ್ರಜ್ಞ – ಸಿ | ಸಾಮಾನ್ಯ / ಇಡಬ್ಲ್ಯೂ ಎಸ್ / ಇ.ಹಿ.ವ (ಎನ್ ಸಿ ಎಲ್) – 60%, ಪ.ಜಾ./ ಪ.ಪಂ./ ಪಿಡಬ್ಲ್ಯೂಬಿಡಿ– 50% |

**4.೦ <u>ಅನುಭವ</u>**– ಶೂನ್ಯ

**೫.೦ <u>ಕರ್ನಾಟಕ ಉದ್ಯೋಗ ವಿನಿಮಯ ನೋಂದಣೀಕರಣ –</u>**

ಎಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿ ಮತ್ತು ತಂತ್ರಜ್ಞ 'ಸಿ' ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಕರ್ನಾಟಕದ ಉದ್ಯೋಗ ವಿನಿಮಯದಲ್ಲಿನ ಮಾನ್ಯ ಉದ್ಯೋಗ ನೋಂದಣಿ ಕಾರ್ಡಿನ ಅಗತ್ಯವಿರುತ್ತದೆ. ಉದ್ಯೋಗ ವಿನಿಮಯ ನೋಂದಣಿಯು 04.11.2025 ರಂದು ಮಾನ್ಯ ಮತ್ತು ಸಕ್ರಿಯ ಸ್ಥಿತಿಯಲ್ಲಿರತಕ್ಕದ್ದು. ಅವಧಿ ಮೀರಿದ / ಸಕ್ರಿಯ ಸ್ಥಿತಿಯಲ್ಲಿ ಇಲ್ಲದ ಉದ್ಯೋಗ ವಿನಿಮಯ ನೋಂದಣಿ ಕಾರ್ಡನ್ನು ಪರಿಗಣಿಸಲಾಗುವುದಿಲ್ಲ.

**೬.೦ <u>ಆಯ್ಕೆಯ ವಿಧಾನ:</u>**

a) ಅರ್ಹತಾ ಮಾನದಂಡಗಳನ್ನು ಪೂರೈಸಿ ಯಾವ ಅಭ್ಯರ್ಥಿಗಳ ಆನ್ ಲೈನ್ ಅರ್ಜಿಗಳನ್ನು ಸ್ವೀಕರಿಸಲ್ಪಡುವುದೋ ಅಂತಹ ಅಭ್ಯರ್ಥಿಗಳನ್ನು ಬೆಂಗಳೂರಿನಲ್ಲಿ ಆಯೋಜಿಸುವ **ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ** ತಾತ್ಕಾಲಿಕವಾಗಿ ಶಾರ್ಟ್ ಲಿಸ್ಟ್ ಮಾಡಲಾಗುವುದು.

b) ಮಾನದಂಡಗಳನ್ನು ಪೂರೈಸಿದ ಅಭ್ಯರ್ಥಿಗಳನ್ನು ಮತ್ತು ಆನ್ ಲೈನ್ ಮೂಲಕ ಸ್ವೀಕರಿಸಲಾದ ಅರ್ಜಿಗಳಿಗೆ ಎಸ್ ಎಮ್ ಎಸ್ ಮತ್ತು ಇ–ಮೇಲ್ ಕಳುಹಿಸಲಾಗುವುದು. ಅಭ್ಯರ್ಥಿಗಳು **ಕಂಪ್ಯೂಟರ್ ಆಧಾರಿತ ಪರೀಕ್ಷೆಯ ಕಾಲ್ ಲೆಟರ್** ಅನ್ನು ಡೌನ್ ಲೋಡ್ ಮಾಡಲು ತಮ್ಮ ವಿವರಗಳೊಂದಿಗೆ ಬಿಇಎಲ್ ವೆಬ್ ಸೈಟ್ ನಲ್ಲಿ ಲಾಗ್ ಇನ್ ಮಾಡತಕ್ಕದ್ದು.

c) ಅಭ್ಯರ್ಥಿಗಳು ಕಾಲ್ ಲೆಟರ್ ಅನ್ನು ಮುದ್ರಿಸತಕ್ಕದ್ದು ಮತ್ತು ಅದರಲ್ಲಿ ಸೂಚಿಸಿದ ಅನುದೇಶಗಳನ್ನು ಪಾಲಿಸತಕ್ಕದ್ದು. ಕಾಲ್ ಲೆಟರ್ ಅನ್ನು ಇ–ಮೇಲ್ ಅಥವಾ ಪೋಸ್ಟ್ ಮೂಲಕ ಕಳುಹಿಸುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

d) ಆನ್ ಲೈನ್ ಅರ್ಜಿಗಳ ಸಲ್ಲಿಸುವಿಕೆ ಪ್ರಕ್ರಿಯೆ ಮೂಲಕ ಸ್ವೀಕರಿಸಲ್ಪಟ್ಟ ಅಭ್ಯರ್ಥಿಗಳು ತಮ್ಮ ಸಂಬಂಧಪಟ್ಟ ಕೇಂದ್ರದಲ್ಲಿ ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಹಾಜರಾಗಲು ಅರ್ಹರಿರುತ್ತಾರೆ. ಕಾಲ್ ಲೆಟರ್ ಅನ್ನು ಬಿಇಎಲ್ ವೆಬ್ಸೈಟ್ ನಲ್ಲಿ ಅಪ್ ಲೋಡ್ ಮಾಡಲಾಗುವುದು.

e) ಅರ್ಹ ಅಭ್ಯರ್ಥಿಗಳು ಈ ಕೆಳಗಿನವುಗಳನ್ನು ಒಳಗೊಂಡಿರುವ 150 ಅಂಕಗಳಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ.

**ಭಾಗ 1: ಸಾಮಾನ್ಯ ಆಪ್ಟಿಟ್ಯೂಡ್:** 50 ಅಂಕಗಳು – ಸಾಮಾನ್ಯ ಮಾನಸಿಕ ಸಾಮರ್ಥ್ಯ ಮತ್ತು ಅಭಿರುಚಿಯಿಂದ ತಾರ್ಕಿಕ ಸಮರ್ಥನೆಯವರೆಗು, ವಿಶ್ಲೇಷನಾತ್ಮಕ, ವ್ಯಾಪಕ ಸಾಮರ್ಥ್ಯ, ಮೂಲ ಸಂಖ್ಯಾಶಾಸ್ತ್ರ, ದತ್ತಾಂಶ ವ್ಯಾಖ್ಯಾನ ಕೌಶಲ್ಯ ಮತ್ತು ಸಾಮಾನ್ಯ ಜ್ಞಾನವನ್ನು ಒಳಗೊಂಡಿರುತ್ತದೆ.

**ಭಾಗ 2: ತಾಂತ್ರಿಕ ಆಪ್ಟಿಟ್ಯೂಡ್:** 100 ಅಂಕಗಳು – ತಾಂತ್ರಿಕ /ವೃತ್ತಿಪರ ಜ್ಞಾನ ಪರೀಕ್ಷೆ ಜೊತೆಗೆ ಆಯಾ ವಿಷಯದಿಂದ ನಿರ್ದಿಷ್ಟ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

**ಕನಿಷ್ಠ ಅರ್ಹತಾ ಅಂಕಗಳು ಹೀಗಿವೆ:**

| ವರ್ಗ | ಶೇಕಡ |
|---|---|
| ಸಾಮಾನ್ಯ / ಇ.ಹಿ.ವ./ ಇ.ಡಬ್ಲ್ಯೂ.ಎಸ್ | ಭಾಗ 1 ಮತ್ತು ಭಾಗ 2 ಎರಡರಲ್ಲೂ ಪ್ರತ್ಯೇಕವಾಗಿ 35% |
| ಪ.ಜಾ./ಪ.ಪಂ. /ಪಿ.ಡಬ್ಲ್ಯೂಬಿ ಡಿ | ಭಾಗ 1 ಮತ್ತು ಭಾಗ 2 ಎರಡರಲ್ಲೂ ಪ್ರತ್ಯೇಕವಾಗಿ 30% |

a) ಕಂಪ್ಯೂಟರ್ ಆಧಾರಿತ ಪರೀಕ್ಷೆಯ ಆಧಾರದ ಮೇಲೆ ತಾತ್ಕಾಲಿಕವಾಗಿ ಲಘು ಸೂಚಿತ ಅಭ್ಯರ್ಥಿಗಳ ಪಟ್ಟಿಯನ್ನು ಬಿಇಎಲ್ ವೆಬ್ ಸೈಟ್ ನಲ್ಲಿ ಕ್ವೈರಿ ಮೋಡ್ ನಲ್ಲಿ ಲಭಿಸಲು ವ್ಯವಸ್ಥೆ ಮಾಡಲಾಗುವುದು.

b) ಕಂಪ್ಯೂಟರ್ ಆಧಾರಿತ ಪರೀಕ್ಷೆ ಪ್ರಾಯಶ: **ನವೆಂಬರ್/ಡಿಸೆಂಬರ್, 2025** ತಿಂಗಳಿನಲ್ಲಿ ನಡೆಸಲಾಗುವುದು.

ಇ) **ಅಧಿಕಾರೇತರ ಆಯ್ಕೆಗೆ ಸಂಬಂಧಪಟ್ಟಂತೆ ಕಂಪ್ಯೂಟರ್ ಆಧಾರಿತ ಪರೀಕ್ಷೆಯಲ್ಲಿ ಸಮನಾದ ಅಂಕಗಳು ಪಡೆದ ಸಂದರ್ಭದಲ್ಲಿ ನಿರ್ಣಯಿಸುವ ವಿಧಾನವು :** ಅರ್ಹತೆಗಾಗಿ ಸಮನಾದ ಅಂಕಗಳನ್ನು ನಿರ್ಣಯಿಸಲು ಈ ಕೆಳಕಂಡ ಅಂಶವನ್ನು ಪರಿಗಣಿಸಲಾಗುವುದು.

೧. ತಾಂತ್ರಿಕ ಭಾಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ಅಭ್ಯರ್ಥಿ, ಒಂದು ವೇಳೆ ಸಮವಾದ ಅಂಕ ಗಳಿಸಿದ್ದಲ್ಲಿ

೨. ಸಾಮಾನ್ಯ ಅರಿವು ಭಾಗದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ಅಭ್ಯರ್ಥಿ, ಒಂದು ವೇಳೆ ಸಮವಾದ ಅಂಕ ಗಳಿಸಿದ್ದಲ್ಲಿ

೩. ವಿದ್ಯಾರ್ಹತೆಯಲ್ಲಿ ಪಡೆದಿರುವ ಶೇಕಡವಾರು ಅಂಕಗಳು, ಒಂದು ವೇಳೆ ಸಮವಾದ ಪಕ್ಷದಲ್ಲಿ

೪. ಜನ್ಮ ದಿನಾಂಕದ ಹಿರಿತನವನ್ನು ಪರಿಗಣಿಸಲಾಗಿವುದು.

**7.0** **ವೇತನ ಮತ್ತು ಭತ್ಯೆಗಳು:** ಆಯ್ದ ಅಭ್ಯರ್ಥಿಗಳನ್ನು ಪುಟ ೧– ಕಾಲಮ್ ೭, ಕ್ರ.ಸಂ ೧.೦ ರಲ್ಲಿ ಉಲ್ಲೇಖಿಸಿರುವ ವೇತನ ಶ್ರೇಣಿಯಲ್ಲಿ ನೇಮಕಗೊಳಿಸಲಾಗುವುದು. ಇಂಜಿನಿಯರಿಂಗ್ ಸಹಾಯಕ ಶಿಕ್ಷಣಾರ್ಥಿ (ಇ.ಎ.ಟಿ ) ಆರು ತಿಂಗಳ ಪ್ರಾರಂಭಿಕ ಅವಧಿಗೆ ತರಬೇತಿ ಪಡೆಯಲಿದ್ದು, ಈ ಅವಧಿಯಲ್ಲಿ ಅವರಿಗೆ ರೂ.24,000 ರಂತೆ ಪ್ರತಿ ತಿಂಗಳು ಸ್ಟೈಪೆಂಡ್ ಪಾವತಿಸಲಾಗುವುದು.ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಮತ್ತು ಶ್ರೇಣೀಕರಣಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ, ಮೇಲೆ ಸೂಚಿಸಲಾದ ನಿಯತ ವೇತನ ಶ್ರೇಣಿಯಲ್ಲಿ ನೇಮಕ ಮಾಡಲಾಗುವುದು.

ಮೂಲ ವೇತನದಲ್ಲಿ, ಇತರ ಭತ್ಯೆಗಳಾದ, ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ಶೇ.30% ರ ವಿಶೇಷ ಸವಲತ್ತುಗಳನ್ನು ವಾರ್ಷಿಕ ವೇತನದಲ್ಲಿ ನೀಡಲಾಗುವುದು ಮತ್ತು ವೈದ್ಯಕೀಯ ಖರ್ಚಿನ ಮರುಪಾವತಿ, ಸಮೂಹ ವಿಮೆ, ಭವಿಷ್ಯನಿಧಿ, ಪೆಂಷನ್, ಗ್ರಾಚುಟಿ (ಉಪದಾನ) ಇತ್ಯಾದಿಗಳನ್ನು ಕಂಪನಿಯ ನಿಯಮದಂತೆ ಪ್ಯಾಕೇಜ್ ನಲ್ಲಿ ಸವಲತ್ತುಗಳನ್ನು ನೀಡಲಾಗುವುದು.

**8.0** **ಅರ್ಜಿ ಶುಲ್ಕ:**

ಸಾಮಾನ್ಯ/ ಇ.ಹಿ.ವ.(ಎನ್ ಸಿ ಎಲ್) / ಇ.ಡಬ್ಲ್ಯೂ.ಎಸ್. ವರ್ಗಕ್ಕೆ ಸೇರಿದ ಅಭ್ಯರ್ಥಿಗಳು, ರೂ.500+18%=ರೂ.590 ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.

i) ಪ.ಜಾ./ಪ.ಪಂ./ ಪಿ. ಡಬ್ಲ್ಯೂಬಿ ಡಿ ಮತ್ತು ಮಾಜಿ ಸೈನಿಕರಿಗೆ ಅರ್ಜಿ ಶುಲ್ಕ ಪಾವತಿಸುವುದರಿಂದ ವಿನಾಯಿತಿ ನೀಡಲಾಗಿದೆ

**ii)** ಅರ್ಜಿ ಶುಲ್ಕವನ್ನು ಕಳುಹಿಸುವ ಮೊದಲು ಅಭ್ಯರ್ಥಿಗಳು ಎಲ್ಲಾ ಸೂಚನೆಗಳು ಮತ್ತು ಅರ್ಹತಾ ಮಾನದಂಡಗಳನ್ನು ಎಚ್ಚರಿಕೆಯಿಂದ ಓದಿ ಅರ್ಥ ಮಾಡಿಕೊಳ್ಳ ಬೇಕು.

iii) ಅಭ್ಯರ್ಥಿಗಳು ಒಮ್ಮೆ ಅರ್ಜಿ ಶುಲ್ಕವನ್ನು ಪಾವತಿಸಿದ್ದಲ್ಲಿ ಅದನ್ನು ಕಂಪನಿ / ಬ್ಯಾಂಕ್ ಮೂಲಕ ಮರುಪಾವತಿಸಲಾಗುವುದಿಲ್ಲ.

iv. ಅರ್ಜಿ ಶುಲ್ಕವನ್ನು ಆನ್‌ಲೈನ್ಮೋಡ್ ಅಂದರೆ ಎಸ್.ಬಿ.ಐ. ಕಲೆಕ್ಟ್ ಮುಖಾಂತರ ಕಳುಹಿಸಬೇಕು.

**ಸೂಚನೆ** – ಅಭ್ಯರ್ಥಿಯು ಪಾವತಿಸಬೇಕಾದ ಅರ್ಜಿ ಶುಲ್ಕವು ಯಾವುದೇ ಕಾರಣಗಳಿಂದ ಅಂದರೆ, ಅಭ್ಯರ್ಥಿಗಳ ಬ್ಯಾಂಕ್ ನಿಂದ ಶುಲ್ಕವು ಕಡಿತಗೊಳ್ಳಲು ವಿಫಲವಾದರೆ ಅಥವಾ ಬಿಇಎಲ್ ನಿಂದ ಜಾಹೀರಾತುಗೊಳಿಸಿದ ಯಾವುದೇ ಇತರೆ ಹುದ್ದೆಗೆ ಪಾವತಿಸಿದರೆ / ಬಿಇಎಲ್ ಗೆ ಸಂಬಂಧಿಸಿದ ಅಥವಾ ನೇರವಾಗಿ ಸಂಬಂಧಿಸದ ಯಾವುದೇ ಇತರೆ ಅರ್ಜಿ ಶುಲ್ಕವು ಪಾವತಿಯಾಗದಿದ್ದರೆ ಅದನ್ನು ಪರಿಗಣಿಸಲಾಗುವುದಿಲ್ಲ.

***ಪಾವತಿ ಮಾಡಲು ಸೂಚನೆಗಳು:***

ಬಿಇಎಲ್ ವೆಬ್ ಸೈಟ್ ನಲ್ಲಿ ಲಭ್ಯವಿರುವ ಪೇಮೆಂಟ್ ಲಿಂಕ್ ನ ಮೇಲೆ ಕ್ಲಿಕ್ ಮಾಡಿರಿ ಅಥವಾ

https://www.onlinesbi.sbi/sbicollect/icollecthome.htm?corpID=14842 ಲಿಂಕ್ ನ ಮೇಲೆ ಕ್ಲಿಕ್ ಮಾಡಿರಿ.

1. www.onlinesbi.com ಗೆ ತೆರಳಿಮತ್ತುಆಯ್ಕೆಮಾಡಿ: – ಸ್ಟೇಟ್ ಬ್ಯಾಂಕ್ ಕಲೆಕ್ಟ್
2. ನಿಯಮಗಳು ಮತ್ತು ಷರತ್ತುಗಳನ್ನು ಅಂಗೀಕರಿಸಿ ನಂತರ ಪ್ರೊಸೀಡ್ ಅನ್ನು ಕ್ಲಿಕ್ ಮಾಡಿ.
3. ನಿಗಮದ ರಾಜ್ಯ / ಸಂಸ್ಥೆಯನ್ನು ಆಯ್ಕೆ ಮಾಡಿ : – ಅಖಿಲ ಭಾರತ.
4. ಪಿಎಸ್ ಯು ಆಯ್ಕೆ ಮಾಡಿ – ಸಾರ್ವಜನಿಕ ಉದ್ಯಮ –ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಮತ್ತು SUBMIT ಗುಂಡಿಯನ್ನು ಒತ್ತಿ.
5. ಶುಲ್ಕ ಪಾವತಿಸುವ ವರ್ಗವನ್ನು ಆಯ್ಕೆ ಮಾಡಿ: – (ಹುದ್ದೆಯ ಹೆಸರು–ಬೆಂ.ಸಂ.ಕ್ಕೆಅಧಿಕಾರರೇತರರ ನೇಮಕಾತಿ )
6. ಮೇಲೆ ವಿವರಿಸಿದಂತೆ ಪಾವತಿಯನ್ನು ಪೂರ್ಣಗೊಳಿಸಿ.
7. ಪಾವತಿ ರಶೀದಿಯನ್ನು ಸೇವ್ ಮಾಡಿ / ಸ್ಕ್ರೀನ್ ಶಾಟ್ ಮಾಡಿ ಮತ್ತು ಅದನ್ನು ಅರ್ಜಿಯೊಂದಿಗೆ ಲಗತ್ತಿಸಿ.
8. ಜಾಹೀರಾತಿನೊಂದಿಗೆ ಸ್ಕ್ರೀನ್ ಶಾಟ್‌ಗಳ ಜೊತೆಗೆ ವಿವರವಾದ ಸೂಚನೆಗಳನ್ನು ನೀಡಲಾಗಿದೆ.

ಅಭ್ಯರ್ಥಿಗಳು ಪಾವತಿ ಮಾಡಿದ ನಂತರ ಪ್ರದರ್ಶಿತವಾಗುವ "SBI Collect Reference Number" ಅನ್ನು ಅರ್ಜಿಯಲ್ಲಿ ಉಲ್ಲೇಖಿಸಬೇಕು.

**9.0** **ಅರ್ಜಿ ಸಲ್ಲಿಸುವುದು ಹೇಗೆ:**

(a) ಮೇಲೆ ತಿಳಿಸಲಾದ ಮಾನದಂಡವನ್ನು ಪೂರೈಸುವ ಅಭ್ಯರ್ಥಿಗಳು ಬಿಇಎಲ್ ವೆಬ್ ಸೈಟ್ ನಲ್ಲಿ ಒದಗಿಸಲಾದ ಆನ್ ಲೈನ್ ಲಿಂಕ್ https://jobapply.in/BEL2025BNGEATTech ನ ಮೂಲಕ ಅರ್ಜಿ ನಮೂನೆಯನ್ನು ತುಂಬ ಬಹುದಾಗಿದೆ. ಬಿಇಎಲ್ ವೆಬ್ ಸೈಟ್ ನಲ್ಲಿಯೂ ಸಹ ಆನ್ ಲೈನ್ ಲಿಂಕ್ ಅನ್ನು ಒದಗಿಸಲಾಗಿದೆ.

b) ಅಭ್ಯರ್ಥಿಗಳು ಒಂದು ಮಾನ್ಯ ಮತ್ತು ಸಕ್ರಿಯ ಇ-ಮೇಲ್ ಐ ಡಿ ಯನ್ನು ಹೊಂದಿರತಕ್ಕದ್ದು. ಅದನ್ನು ಆನ್ ಲೈನ್ ಅರ್ಜಿಯಲ್ಲಿ ಸೂಚಿಸಿರತಕ್ಕದ್ದು. ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಸಂಬಂಧಪಟ್ಟ ಮಾಹಿತಿಯನ್ನು ಮತ್ತು ಇತರೆ ಪತ್ರ ವ್ಯವಹಾರವನ್ನು ಅಭ್ಯರ್ಥಿ ಮೂಲಕ ಒದಗಿಸಲಾದ ಇ-ಮೇಲ್ ಗೆ ಕಳುಹಿಸಲಾಗುವುದು. ಯಾವುದೇ ಸಂದರ್ಭದಲ್ಲಿ ಅಭ್ಯರ್ಥಿಯು ತನ್ನ ಇ-ಮೇಲ್ ಐ ಡಿ ಯನ್ನು ಇತರೆ ವ್ಯಕ್ತಿಯೊಂದಿಗೆ ಹಂಚಿಕೊಳ್ಳಬಾರದು. ಅಭ್ಯರ್ಥಿಗಳಿಗೆ ಕಳುಹಿಸಲಾದ ಯಾವುದೇ ಇ-ಮೇಲ್ ಬೌನ್ಸ್ ಆದ ಪಕ್ಷದಲ್ಲಿ ಬಿಇಎಲ್ ಜವಾಬ್ದಾರಿ ಇರುವುದಿಲ್ಲ. ಒಮ್ಮೆ ನಮೂದಿಸಿದ ಇ-ಮೇಲ್ ಅಥವಾ ಮೊಬೈಲ್ ಸಂಖ್ಯೆಯ ಬದಲಾವಣೆಗೆ ಅನುಮತಿ ನೀಡಲಾಗುವುದಿಲ್ಲ.

c) ದಯವಿಟ್ಟು ಅರ್ಜಿಯ ಪ್ರಿಂಟ್ ಔಟ್ ಅನ್ನು ಮತ್ತು ಪಾವತಿಸಿದ ಸ್ವೀಕೃತಿಯನ್ನು ಮುಂದಿನ ಉಲ್ಲೇಖಕ್ಕಾಗಿ ಸುರಕ್ಷಿತವಾಗಿಡಿ.

d) **ದಯವಿಟ್ಟು ಬಿಇಎಲ್ ನ ಕಚೇರಿಗೆ ಅರ್ಜಿಯ ಮುದ್ರಿತ ಪ್ರತಿಯನ್ನು ಕಳುಹಿಸಬೇಡಿ, ಯಾವುದೇ ಮುದ್ರಿತ / ಕಾಗದ ರೂಪದಲ್ಲಿನ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.**

e) ಹುದ್ದೆಗೆ ಅರ್ಜಿಯನ್ನು ಸಲ್ಲಿಸುವ ಮುನ್ನ, ಅಭ್ಯರ್ಥಿಗಳು ಜಾಹೀರಾತಿನಲ್ಲಿ ತಿಳಿಸಲಾದ ಅರ್ಹತೆ ಮಾನದಂಡವನ್ನು ಆತ / ಆಕೆಯು ಪೂರೈಸುವುದನ್ನು ಖಾತರಿಗೊಳಿಸತಕ್ಕದ್ದು.

f) ಅಭ್ಯರ್ಥಿಗಳು ಕೊನೆ ಘಳಿಗೆಯಲ್ಲಿ ತಮ್ಮ ಅರ್ಜಿಯನ್ನು ಸಲ್ಲಿಸಲು ಸಾಧ್ಯವಾಗದ ಸಂದರ್ಭದಲ್ಲಿ ಬಿಇಎಲ್ ಜಾವಾಬ್ದಾರಿಯಲ್ಲ.

## 10.0 ಸಾಮಾನ್ಯ ಸೂಚನೆಗಳು :

a. ಹುದ್ದೆಗೆ ಮೇಲಿನ ಎಲ್ಲಾ ಅಹರ್ತಾ ಮಾನದಂಡಗಳನ್ನು ಪೂರೈಸುವ ಅಭ್ಯರ್ಥಿಗಳನ್ನು ಮಾತ್ರ ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಕರೆಯಲಾಗುವುದು. ಅದಾಗ್ಯೂ ಅರ್ಜಿದಾರರ ಉಮೇದುವಾರಿಕೆಯು ತಾತ್ಕಾಲಿಕವಾಗಿರುತ್ತದೆ ಮತ್ತು ಅದು ಆತ / ಆಕೆ ಸಲ್ಲಿಸಿದ ಪ್ರಮಾಣ ಪತ್ರಗಳು/ ದಾಖಲೆಗಳ ಪರಿಶೀಲನೆಗೆ ಒಳಪಟ್ಟಿರುತ್ತದೆ.

b. ಸರ್ಕಾರಿ / ಅರೆ ಸರ್ಕಾರಿ / ಸಾರ್ವಜನಿಕ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು " **ಆಕ್ಷೇಪಣೆರಹಿತ ಪ್ರಮಾಣಪತ್ರ**" ವನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ಸಲ್ಲಿಸತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ಇದನ್ನು ಸಲ್ಲಿಸಲು ವಿಫಲವಾದಲ್ಲಿ ಆತ / ಆಕೆಯ ಅಭ್ಯರ್ಥಿತನವು ಅನರ್ಹಗೊಳ್ಳುವುದು.

c. ಜಾಹೀರಾತಿನಲ್ಲಿ ನೀಡಿದ ವಿದ್ಯಾರ್ಹತೆಯು ಮಾನ್ಯತೆ ಪಡೆದ ಸಂಸ್ಥೆ / ಮಂಡಲಿ / ಪರಿಷತ್ತು / ವಿಶ್ವವಿದ್ಯಾಲಯದಿಂದ ಪಡೆದಿರತಕ್ಕದ್ದು. ಪದವಿ /ಡಿಪ್ಲೋಮಾ ಪಡೆಯುವಾಗ ಎಲ್ಲೆಲ್ಲಿ ಎಸ್ ಜಿಪಿಎ / ಸಿಜಿಪಿಎ/ಒಜಿಪಿಎ/ಡಿಜಿಪಿಎ ಅಥವಾ ಅಂತಿಮ / ಘಟಿಕೋತ್ಸವ ಪ್ರಮಾಣಪತ್ರದಲ್ಲಿ ಲೆಟರ್ ಗ್ರೇಡ್ ಉಲ್ಲೇಖವಾಗಿದೆಯೋ ಅದರ ಸಮಾನಾಂತರ ಶೇಕಡವಾರು ಅಂಕಗಳನ್ನು ವಿಶ್ವವಿದ್ಯಾಲಯ/ ಸಂಸ್ಥೆಯು ಅಳವಡಿಸಿಕೊಂಡ ನಿಯಮಗಳನುಸಾರವಾಗಿ ಅರ್ಜಿ ನಮೂನೆಯಲ್ಲಿ ಅದನ್ನು ಸೂಚಿಸತಕ್ಕದ್ದು. ಎಸ್ ಜಿಪಿಎ / ಸಿಜಿಪಿಎ/ಒಜಿಪಿಎ /ಡಿಜಿಪಿಎ ನಿಂದ ಶೇಕಡವಾರುವಾಗಿ ಪರಿವರ್ತನೆ ಮಾಡಲು ವಿಶ್ವವಿದ್ಯಾಲಯ/ ಸಂಸ್ಥೆಯು ಅಳವಡಿಸಿಕೊಂಡ ನಿಯಮಗಳ ಸಾಕ್ಷ್ಯವನ್ನು ಪರಿಶೀಲನೆಯ ಸಮಯದಲ್ಲಿ ಪ್ರಸ್ತುತಪಡಿಸತಕ್ಕದ್ದು.

d. ಅಭ್ಯರ್ಥಿಗಳು ಮಾನ್ಯ ಫೋಟೊ ಗುರುತಿನ ಸಾಕ್ಷ್ಯವನ್ನು ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಹಾಜರಾಗುವಾಗ ಪ್ರಸ್ತುತಪಡಿಸಬೇಕು.

e. ಅಭ್ಯರ್ಥಿಯು ಆರೋಗ್ಯವಂತರಾಗಿರತಕ್ಕದ್ದು. ಆರೋಗ್ಯ ಮಾನಕಗಳಲ್ಲಿ ಯಾವುದೇ ಸಡಿಲಿಕೆಯನ್ನು ನೀಡಲಾಗುವುದಿಲ್ಲ. ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯು ನಿಯಮಗಳು ಮತ್ತು ವೈದ್ಯಕೀಯ ಆರೋಗ್ಯದ ಮಾನಕದ ಅನುಸಾರವಾಗಿ ನಿರ್ವಹಿಸುವ ಪೂರ್ವ ನೇಮಕಾತಿ ವೈದ್ಯಕೀಯ ಪರೀಕ್ಷೆಯಲ್ಲಿ ವೈದ್ಯಕೀಯವಾಗಿ ಆರೋಗ್ಯವಂತ ಎಂಬುದುರ ಮೇಲೆ ಅವಲಂಬಿತವಾಗಿರುತ್ತಾರೆ.

f. ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಹಾಜರಾಗಲು ನಗರದ ಹೊರಗಿನಿಂದ ಬರುವ ಎಲ್ಲಾ ಪ.ಜಾ/ಪ.ಪಂ./ಪಿ.ಡಬ್ಲ್ಯು.ಬಿ ಡಿ ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳಿಗೆ ರೈಲಿನ (ಸ್ಲೀಪರ್ ಶ್ರೇಣಿ ಆಧಾರಿತ ಶುಲ್ಕ) ದಂತೆ ತಮ್ಮ ಪತ್ರ ವ್ಯವಹಾರ ಅಥವಾ ಭಾರತದ ಯಾವುದೇ ಭಾಗದಿಂದ ಬರುವ ಅಥವಾ ತೆರಳುವ ಟಿಕೆಟ್ ಗಳನ್ನು ಸಲ್ಲಿಸಿದ್ದಲ್ಲಿ ಪರೀಕ್ಷೆಗೆ ತಲುಪಲು ಬಹು ಹತ್ತಿರದ ಮಾರ್ಗದ ಮೇರೆಗೆ ಪ್ರವಾಸ ಭತ್ಯೆಯನ್ನು ಮರು ಪಾವತಿಸಲಾಗುವುದು. ಇಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ಘೋಷಿಸಿದ ಪತ್ರವ್ಯವಹಾರ ವಿಳಾಸ ಅಥವಾ ವಾಸ್ತವಿಕವಾಗಿ ಪ್ರವಾಸವನ್ನು ಕೈಗೊಂಡಿರುವ ಸ್ಥಳ, ಇದರಲ್ಲಿ ಯಾವುದು ಹತ್ತಿರವೋ, ಅದನ್ನು ಹತ್ತಿರದ ಮಾರ್ಗವನ್ನಾಗಿ ಪರಿಗಣಿಸಲಾಗುವುದು. ಅಭ್ಯರ್ಥಿಗಳಿಂದ ಸಲ್ಲಿಸಲಾದ ಸಂಬಂಧಿತ ದಾಖಲೆಗಳ ಪರಿಶೀಲನೆ ನಂತರ ಪ್ರವಾಸ ಭತ್ಯೆಯನ್ನು ಮರು ಪಾವತಿ ಮಾಡುವ ಸಲುವಾಗಿ ಬ್ಯಾಂಕ್ ಖಾತೆ ವಿವರಗಳು, ಪ್ರಯಾಣ ಮಾಡಲಾದ ರೈಲ್ / ಬಸ್ ಟಿಕೆಟ್ ಮತ್ತು ಸ್ವಯಂ ಪ್ರಮಾಣೀಕೃತ ಪ.ಜಾ./ಪ.ಪಂ./ಪಿಡಬ್ಲ್ಯೂಬಿಡಿ ಪ್ರಮಾಣಪತ್ರವನ್ನು ಕಂಪ್ಯೂಟರ್ ಆಧಾರಿತ ಪರೀಕ್ಷೆಯ ಸಮಯದಲ್ಲಿ ಒದಗಿಸಬೇಕೆಂಬುದನ್ನು ಅಭ್ಯರ್ಥಿಗಳು ಗಮನಿಸತಕ್ಕದ್ದು. ಪ್ರವಾಸಕ್ಕೆ ಟಿ.ಎ. ಕೋರಿಕೆಯನ್ನು ಸಲ್ಲಿಸುವ ಪ.ಜಾ./ಪ.ಪಂ./ಪಿಡಬ್ಲ್ಯೂಬಿಡಿ ಮತ್ತು ಮಾಜಿ ಸೈನಿಕರು ಜಾತಿ / ವಿಕಾಲಂಗತೆ ಪ್ರಮಾಣಪತ್ರದ ಮೂಲ ಪ್ರತಿಯನ್ನು ಸಲ್ಲಿಸತಕ್ಕದ್ದು. ಇ ಸಿ ಎಸ್ ಮೂಲಕ ನಂತರದ ದಿನಾಂಕದಲ್ಲಿ ಮರುಪಾವತಿಯನ್ನು ಮಾಡಲಾಗುವುದು.

g. ಸ್ಥಳೀಯ ಪ್ರಯಾಣ ಖರ್ಚನ್ನು ಅಭ್ಯರ್ಥಿಗಳೇ ಭರಿಸತಕ್ಕದ್ದು.

h. ಯಾವುದೇ ಅಭ್ಯರ್ಥಿಯು ತನ್ನ ಹಿಂದಿನ ಉದ್ಯೋಗದಾತರ ಅಥವಾ ಬಿಇಎಲ್ ನೊಂದಿಗೆ ಕಾನೂನು ವ್ಯಾಜ್ಯವಿದ್ದಲ್ಲಿ ಆನ್ ಲೈನ್ ಅರ್ಜಿಯಲ್ಲಿ ಅದನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

i. ಅಪೂರ್ಣವಾದ ಮತ್ತು ನಿಗದಿತ ಪ್ರಪತ್ರದಲ್ಲಿ ಇಲ್ಲದ, ಅಥವಾ ನಿಗದಿತ ಶುಲ್ಕ ಪಾವತಿಸದಲ್ಲದ ಆನ್ ಲೈನ್ ಅರ್ಜಿ ನಮೂನೆಗಳನ್ನು ಒಮ್ಮೆಲೆ ತಿರಸ್ಕರಿಸಲಾಗುವುದು ಮತ್ತು ಈ ಸಂಬಂಧವಾಗಿ ಯಾವುದೇ ಪತ್ರ ವ್ಯವಹಾರವನ್ನು ಅಂಗೀಕರಿಸಲಾಗುವುದಿಲ್ಲ.

j) **ಸೂಚನೆ** – ಅಭ್ಯರ್ಥಿಯು ಪಾವತಿಸಬೇಕಾದ ಅರ್ಜಿ ಶುಲ್ಕವು ಯಾವುದೇ ಕಾರಣಗಳಿಂದ ಅಂದರೆ, ಅಭ್ಯರ್ಥಿಗಳ ಬ್ಯಾಂಕ್ ನಿಂದ ಶುಲ್ಕವು ಕಡಿತಗೊಳ್ಳಲು ವಿಫಲವಾದರೆ ಅಥವಾ ಬಿಇಎಲ್ ನಿಂದ ಜಾಹೀರಾತುಗೊಳಿಸಿದ ಯಾವುದೇ ಇತರೆ ಹುದ್ದೆಗೆ ಪಾವತಿಸಿದರೆ / ಬಿಇಎಲ್ ಗೆ ಸಂಬಂಧಿಸಿದ ಅಥವಾ ನೇರವಾಗಿ ಸಂಬಂಧಿಸದ ಯಾವುದೇ ಇತರೆ ಅರ್ಜಿ ಶುಲ್ಕವು ಪಾವತಿಯಾಗದಿದ್ದರೆ ಅದನ್ನು ಪರಿಗಣಿಸಲಾಗುವುದಿಲ್ಲ.

k. ಪೋರ್ಟಲ್ ನಲ್ಲಿ ನೋಂದಣೀಕರಣ ಮಾಡಿದ ಮಾತ್ರಕ್ಕೆ ಅಭ್ಯರ್ಥಿಯು ಅರ್ಹತೆ ಮಾನದಂಡವನ್ನು ಪೂರೈಸಿದೆ ಎಂಬುದಲ್ಲ. ದಾಖಲೆಯ ಪರಿಶೀಲನೆ ಸಮಯದಲ್ಲಿ ಸಂಗತ ದಾಖಲೆಗಳ ಮೂಲ ಪ್ರತಿಯನ್ನು ಸಲ್ಲಿಸಿ ದೃಢಪಡಿಸಿಕೊಳ್ಳತಕ್ಕದ್ದು.

l. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಅರ್ಜಿಯನ್ನು ಸಲ್ಲಿಸಬಾರದು. ಅನೇಕ ಅರ್ಜಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ಕೇವಲ ಕೊನೆಯ ಮಾನ್ಯ (ಪೂರ್ಣ) ಅರ್ಜಿಯನ್ನು ಪರಿಗಣಿಸಲಾಗುವುದು ಮತ್ತು ಇತರೆ ಅರ್ಜಿಗಳಿಗೆ ಸಂದಾಯವಾದ ಶುಲ್ಕವನ್ನು ಮುಟ್ಟುಗೋಲು ಹಾಕಲಾಗುವುದು.

m. ಪರೀಕ್ಷಾ ಕೊಠಡಿಯಲ್ಲಿ ಮೊಬೈಲ್ ಫೋನ್/ಪೇಜರ್ಸ್ / ಐ ಪ್ಯಾಡ್/ಐ ಪೋಡ್/ ಟ್ಯಾಬ್ಲೆಟ್ಸ್/ ಫ್ಯಾಬ್ಲೆಟ್ಸ್ / ಸ್ಮಾರ್ಟ್ ಗಡಿಯಾರಗಳು / ಕ್ಯಾಲ್ಕುಲೇಟರ್ ಗಳು ಮತ್ತು ಇತರೆ ಎಲೆಕ್ಟ್ರಾನಿಕ್ ಸಾಧನಗಳನ್ನು ಪರೀಕ್ಷಾ ಕೊಠಡಿಯಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿದೆ. ಅಭ್ಯರ್ಥಿಗಳು ಈ ಸಾಧನಗಳನ್ನು ಪರೀಕ್ಷಾ ಕೊಠಡಿಗೆ ತಾರದಂತೆ ಸಲಹೆ ನೀಡಲಾಗಿದೆ. ಅಭ್ಯರ್ಥಿಗಳು ಒಂದು ವೇಳೆ ಇವುಗಳನ್ನು ಮತ್ತು ಯಾವುದೇ ಇಲೆಕ್ಟ್ರಾನಿಕ್ ವಸ್ತುಗಳನ್ನು ಹೊಂದಿದ ಪಕ್ಷದಲ್ಲಿ ಅಂತಹ ಉಮೇದುವಾರರನ್ನು ಪರೀಕ್ಷೆಗೆ ಅನರ್ಹರೆಂದು ಪರಿಗಣಿಸಲಾಗುವುದು.

n. ಅಭ್ಯರ್ಥಿಯ ಅರ್ಹತೆಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ, ಆ ಅರ್ಹತೆಯ ಬಗ್ಗೆ ಕೈಗೊಳ್ಳಲಾಗುವ ಪರಿಶೀಲನೆಯ ವಿವಿಧ ಹಂತಗಳಲ್ಲಿ,ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಯ ಪ್ರಮಾಣಗಳಲ್ಲಿ ಬಿ.ಇ.ಎಲ್ ನ ನಿರ್ಣಯವೇ ಅಂತಿಮ ಮತ್ತು ಅಭ್ಯರ್ಥಿಗಳು ಇದಕ್ಕೆ ಬದ್ಧರಾಗಿರುತ್ತಾರೆ.

o. ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ತಾವು ಆಯ್ಕೆ ಆಗದ ಪಕ್ಷದಲ್ಲಿ ಯಾವುದೇ ಅಭ್ಯರ್ಥಿಗೆ ಪ್ರತ್ಯೇಕವಾಗಿ ಮಾಹಿತಿಯನ್ನು ತಿಳಿಸಲಾಗುವುದಿಲ್ಲ.

p. ಕಂಪ್ಯೂಟರ್ ಆಧಾರಿತ ಪರೀಕ್ಷೆ / ದಾಖಲೆಯ ಅಂತಿಮ ಪರಿಶೀಲನೆಯ ಯಾವುದೇ ಹಂತದಲ್ಲಿ ಅಭ್ಯರ್ಥಿತನವು ಯಾವುದೇ ಕಾರಣದಿಂದಾಗಿ ಸೂಕ್ತವಿಲ್ಲ ಎಂದು ಪರಿಗಣಿಸಿದ್ದಲ್ಲಿ ಅಭ್ಯರ್ಥಿಯನ್ನು ಬಹಿಷ್ಕರಿಸುವ ಅಧಿಕಾರವನ್ನು ಬಿಇಎಲ್ ಹೊಂದಿರುತ್ತದೆ

q. ಆಯ್ಕೆ ಪ್ರಕ್ರಿಯೆಯ ಎಲ್ಲಾ / ಯಾವುದೇ ಹಂತದಲ್ಲಿ ಪ್ರವೇಶಾತಿಯು ಪೂರ್ಣವಾಗಿ ತಾತ್ಕಾಲಿಕವಿರುತ್ತದೆ. ಅಭ್ಯರ್ಥಿಗೆ ಕೇವಲ ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಕಾಲ್ ಲೆಟರ್ / ತಾತ್ಕಾಲಿಕವಾಗಿ ನೇಮಕಾತಿ ಪತ್ರವನ್ನು ಜಾರಿಗೊಳಿಸಿದ್ದಲ್ಲಿ ಆತ /ಆಕೆಯ ಅಭ್ಯರ್ಥಿತನವನ್ನು ಬಿಇಎಲ್ ಮೂಲಕ ಅಂಗೀಕರಿಸಲಾಗಿದೆ ಎಂದು ಪರಿಗಣಿಸುವಂತಿಲ್ಲ.

r. ಕೇವಲ ವಿದ್ಯಾರ್ಹತೆ ಆವಶ್ಯಕತೆಯನ್ನು ಪೂರೈಸಿದ ಮಾತ್ರಕ್ಕೆ ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಕೂರುವ ಯಾವುದೇ ಹಕ್ಕನ್ನು ಅಭ್ಯರ್ಥಿಯು ಹೊಂದಿರುವುದಿಲ್ಲ.

s. ವಾಸ್ತವಿಕ ಆವಶ್ಯಕತೆಯ ಆದಾರದ ಮೇಲೆ ಆಯ್ಕೆಯ ಸಮಯದಲ್ಲಿ ಯಾವುದೇ ಮಾನದಂಡ, ಆಯ್ಕೆಯ ವಿಧಾನ, ಹುದ್ದೆಗಳ ಸಂಖ್ಯೆ (ರದ್ದು / ಬದಲಾವಣೆ / ಸೇರ್ಪಡೆ) ಯನ್ನು ಬದಲಾಯಿಸಲು ಬಿಇಎಲ್ ಅಧಿಕಾರವನ್ನು ಹೊಂದಿರುತ್ತದೆ.

t. ಅಭ್ಯರ್ಥಿತನವು ಆಯ್ಕೆಯ ಪ್ರಕ್ರಿಯೆ ಅಥವಾ ನೇಮಕವಾದ ನಂತರ ಜಾಹೀರಾತಿನಲ್ಲಿ ಉಲ್ಲೇಖಿಸಿದ ಯಾವುದೇ ಮಾನದಂಡಗಳನ್ನು ಪೂರೈಸದ ಮಾಹಿತಿಯನ್ನು ನೀಡಿದ್ದಲ್ಲಿ ಅಭ್ಯರ್ಥಿಯನ್ನು ಯಾವುದೇ ಹಂತದಲ್ಲಿ ತಿರಸ್ಕರಿಸಬಹುದಾಗಿರುತ್ತದೆ. ಅಭ್ಯರ್ಥಿತನವು ಒಂದು ವೇಳೆ ಅರ್ಜಿಯಲ್ಲಿ ಸೂಚಿಸಿದ ವಿದ್ಯಾರ್ಹತೆ, ಅನುಭವ ಮತ್ತು ಯಾವುದೇ ವಿವರಗಳು / ಇತರೆ ನಮೂನೆಗಳು / ಮಾನ್ಯತೆ ಇಲ್ಲದ ನಮೂನೆಗಳು / ಸುಳ್ಳು / ತಪ್ಪುದಾರಿಗೆ ಎಳೆಯುವ ಮತ್ತು ಬಿ ಇ ಎಲ್ ನ ಗಮನಕ್ಕೆ ತರಬೇಕಾಗುವಂತಹ ಮಾಹಿತಿಯನ್ನು ಮರೆಮಾಚುವುದು ಕಂಡುಬಂದಲ್ಲಿ, ಅಭ್ಯರ್ಥಿಯನ್ನು ಯಾವುದೇ ಹಂತದಲ್ಲಿ ತಿರಸ್ಕರಿಸಲಾಗುವುದು.

u. ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯು ಕಂಪನಿಯ ವೈದ್ಯಕೀಯ ಮಾನಕಗಳ ಅನುಸಾರ ಕಂಪನಿಯ ವೈದ್ಯಕೀಯ ಅಧಿಕಾರಿಗಳ ಮೂಲಕ ವೈದ್ಯಕೀಯವಾಗಿ ಆರೋಗ್ಯವಂತರೆಂದು ರುಜುವಾತು ಮಾಡುವುದರ ಮೇಲೆ ಅವಲಂಬಿಸಿದೆ. ಕಂಪನಿಯ ವೈದ್ಯಕೀಯ ಮಾನಕದ ಅನುಸಾರ, ಬಣ್ಣಗುರುಡು ಹೊಂದಿರುವ ಅಭ್ಯರ್ಥಿಗಳು ಈ ಮೇಲಿನ ಹುದ್ದೆಗಳಿಗೆ ಅನರ್ಹರಾಗುತ್ತಾರೆ ಮತ್ತು ಇದು ವೈದ್ಯಕೀಯ ಷರತ್ತುಗಳಲ್ಲಿ ಒಂದಾಗಿದೆ.

v. ಯಾವುದೇ ರೀತಿಯ ಪ್ರಚಾರವು ಅನರ್ಹತೆಗೆ ಒಳಗಾಗುವುದು. ಯಾವುದೇ ಅಭ್ಯರ್ಥಿಯನ್ನು ಆಯ್ಕೆ ಪ್ರಕ್ರಿಯೆಯ ಯಾವುದೇ

ಹಂತದಲ್ಲಿ ಸೂಕ್ತವಿಲ್ಲ ಎಂದು ಪರಿಗಣಿಸಿದರೆ ಅಭ್ಯರ್ಥಿಯನ್ನು ಬಹಿಷ್ಕಾರ / ಅನರ್ಹ ಗೊಳಿಸಲು ಬಿ ಇ ಎಲ್ ಅಧಿಕಾರ ಹೊಂದಿರುತ್ತದೆ.

w. ಆಂಗ್ಲ ಭಾಷೆ ಹೊರತು ಪಡಿಸಿ ಈ ಜಾಹಿರಾತಿನ ಇತರೆ ಯಾವುದೇ ಆವೃತ್ತಿಗಳಲ್ಲಿ ಅರ್ಥ ವಿವರಣೆಯ ಕುರಿತು ವಿವಾದಗಳು ಉಂಟಾದರೆ, ಬಿ.ಇ.ಎಲ್ ವೆಬ್ ಸೈಟ್ ನಲ್ಲಿರುವ ಆಂಗ್ಲ ಆವೃತ್ತಿಯು ಚಾಲ್ತಿಯಲ್ಲಿರುತ್ತದೆ.

x. ಈ ನೇಮಕಾತಿ ಪ್ರಕ್ರಿಯೆ ಒಳಗೊಂಡಂತೆ ಜಾಹೀರಾತಿನಿಂದ ಉಂಟಾಗುವ ವಿವಾದಗಳು ಬೆಂಗಳೂರಿನಲ್ಲಿರುವ ನ್ಯಾಯಾಲಯದ ಏಕಮಾತ್ರ ಅಧಿಕಾರ ಕ್ಷೇತ್ರಕ್ಕೆ ಒಳಪಟ್ಟಿರುತ್ತದೆ.

y. ಬಿಇಎಲ್ ಸಂಸ್ಥೆಯು ಒಂದು ಧೃಡ ಹಾಗೂ ಪಾರದರ್ಶಕತೆ ನೇಮಕಾತಿ ಪ್ರಕ್ರಿಯೆಯನ್ನು ಹೊಂದಿದ್ದು ಆಯ್ಕೆ ಮಾನದಂಡವು ಸಂಪೂರ್ಣವಾಗಿ ಅಭ್ಯರ್ಥಿಯ ಅರ್ಹತೆಯ ಆಧಾರದ ಮೇಲೆ ಅವಲಂಬಿಸಿರುತ್ತದೆ. ಬಿಇಎಲ್ ಈ ಜಾಹೀರಾತಿನಲ್ಲಿ ನೀಡಿದ ಅರ್ಜಿ ಶುಲ್ಕವನ್ನು ಹೊರತುಪಡಿಸಿ ಭರ್ತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಯಾವುದೇ ಇತರೆ ಶುಲ್ಕ ಅಥವಾ ಹಣ ಸಂದಾಯ ಮಾಡಲು ಕೋರುವ / ಬೇಡಿಕೆಯನ್ನು ಮಾಡುವುದಿಲ್ಲ. ಬಿಇಎಲ್ ನಲ್ಲಿ ಉದ್ಯೋಗ ನೀಡಲು ಈ ಕಂಪನಿಯ ಪ್ರತಿನಿಧಿಯನ್ನಾಗಿ ವರ್ತಿಸಿ ಹಣಪಾವತಿಸಲು ಕೋರಿ ಯಾವುದೇ ವಂಚಕರ ಸಂವಹನಕ್ಕೆ ಮೊರೆ ಹೋಗದಿರಲು ಉದ್ಯೋಗ ಆಕಾಂಕ್ಷಿಗಳಲ್ಲಿ ಅಗ್ರಹಿಸುತ್ತೇವೆ. ಅಂತಹ ವಂಚಕರ ಕೃತಿಯಿಂದ ಉಂಟಾಗುವ ಯಾವುದೇ ನಷ್ಟಕ್ಕೆ ಕಂಪನಿಯು ಹೊಣೆಯಲ್ಲ.

**z.** ಅಂತಹ ಮೋಸ/ ವಂಚಕರಗಳ ವಿರುದ್ಧ ಕ್ರಿಮಿನಲ್ ಕ್ರಮ ಸಹಿತ ಕಾನೂನು ಕ್ರಮವನ್ನು ತೆಗೆದುಕೊಳ್ಳಲು ಬಿಇಎಲ್ ತನ್ನ ಅಧಿಕಾರವನ್ನು ಸುರಕ್ಷಿತವಾಗಿಡುತ್ತದೆ.

aa. ಈ ನೇಮಕಾತಿಗೆ ಸಂಬಂಧಿಸಿದ ಎಲ್ಲಾ ಮುಂದಿನ ಮಾಹಿತಿಗಳನ್ನು / ಪ್ರಕ್ರಿಯೆ ವಿವರಗಳನ್ನು ಕಾಲಕಾಲಕ್ಕೆ ಬಿಇಎಲ್ ವೆಬ್ ಸೈಟ್ http://www.bel-india.inನಲ್ಲಿ ಪ್ರಕಟಿಸಲಾಗುವುದು /ಒದಗಿಸಲಾಗುವುದು.

bb. **ಕಂಪ್ಯೂಟರ್ ಆಧಾರಿತ ಪರೀಕ್ಷೆಯ ಅಂಕದ ಆಧಾರದ ಮೇಲೆ ತಾತ್ಕಾಲಿಕ ಪಟ್ಟಿಯಲ್ಲಿ/ ಆಯ್ಕೆಯಾದ ಅಭ್ಯರ್ಥಿಯನ್ನು ದಾಖಲೆಗಳ ಪರಿಶಿಲನೆಗಾಗಿ ಕರೆಯಲಾಗುತ್ತದೆ. ಅಂತಹ ಅಭ್ಯರ್ಥಿಗಳು ಮೂಲ ದಾಖಲೆಯಗಳನ್ನು ಮತ್ತು ಕೆಳಗೆ ನೀಡಲಾಗಿರುವ ದಾಖಲೆಗಳನ್ನು ಸ್ವಯಂ ಪ್ರಮಾಣಿಕೃತಗೊಳಿಸಿ ಆ ದಾಖಲೆಗಳ ಪ್ರತಿಗಳನ್ನು ಸಲ್ಲಿಸಬೇಕಾಗುತ್ತದೆ.**

1. ಇತ್ತೀಚಿನ ವರ್ಣ ಪಾಸ್ ಪೋರ್ಟ್ ಆಕಾರ ಫೋಟೊ
2. ಎಸ್ ಎಸ್ ಎಲ್ ಸಿ / ಎಸ್ ಎಸ್ ಸಿ / ಐ ಎಸ್ ಸಿ ಅಂಕ ಪಟ್ಟಿ ಮತ್ತು ಜನ್ಮ ದಿನಾಂಕಕ್ಕೆ ಸಾಕ್ಷ್ಯವಾಗಿ ಯಾವುದೇ ಇತರೆ ಮಾನ್ಯ ದಾಖಲೆ.
3. ಶೈಕ್ಷಣಿಕ ವಿದ್ಯಾರ್ಹತೆಗೆ ಪೂರಕವಾಗಿ ಎಸ್ ಎಸ್ ಎಲ್ ಸಿ ಯಿಂದ ಪ್ರಾರಂಭವಾಗುವ ಎಲ್ಲಾ ಪ್ರಮಾಣಪತ್ರಗಳು. ಐಟಿಐ / ಎನ್ ಎ ಸಿ/ ಎಂಜಿನಿಯರಿಂಗ್ ನಲ್ಲಿ ಡಿಪ್ಲೊಮಾ / ಅನ್ವಯವಾಗುವ ಪದವಿಯ ಪ್ರತಿ ಶೈಕ್ಷಣಿಕ ವರ್ಷ/ ಸೆಮಿಸ್ಟರ್ ನ ಅಂಕ ಪತ್ರಗಳು. ವಿಶ್ವವಿದ್ಯಾಲಯ / ಸಂಸ್ಥೆಯ ಮೂಲಕ ಸಿ.ಜಿ.ಪಿ.ಎ. ನಿಂದ ಶೇಕಡವಾರುಗೆ ಪರಿವರ್ತನೆ ಮಾಡಲು ಅಳವಡಿಸಿಕೊಂಡ ನಿಯಮಗಳ ಪುರಾವೆ, ಯಾವುದೇ ಇದ್ದಲ್ಲಿ.
4. ಸಕ್ಷಮ ಪ್ರಾಧಿಕಾರಿ / ಬೋರ್ಡ್ ನಿಂದ ವಿತರಿಸಿದ ಐಟಿಐ / ಎನ್ ಎ ಸಿ / ಎಂಜಿನಿಯರಿಂಗ್ ನಲ್ಲಿ ಡಿಪ್ಲೊಮಾ / ಪದವಿ ಪೂರ್ಣಗೊಂಡ ಪ್ರಮಾಣಪತ್ರಕ್ಕೆ ಸಂಬಂಧಪಟ್ಟ ಅಂತಿಮ ಪ್ರಮಾಣಪತ್ರ / ಘಟಿಕೋತ್ಸವ ಪ್ರಮಾಣಪತ್ರ.
5. ವಿಶ್ವವಿದ್ಯಾಲಯ / ಸಂಸ್ಥೆಯ ಮೂಲಕ ಸಿ.ಜಿ.ಪಿ.ಎ. ನಿಂದ ಶೇಕಡವಾರುಗೆ ಪರಿವರ್ತನೆ ಮಾಡಲು ಅಳವಡಿಸಿಕೊಂಡ ನಿಯಮಗಳ ಪುರಾವೆ, ಯಾವುದೇ ಇದ್ದಲ್ಲಿ.
6. ಅಪ್ರೆಂಟಿಸ್ ಶಿಪ್ ಅಂಕ ಪತ್ರಗಳು ಮತ್ತು ಎನ್ ಎ ಸಿ (ತಂತ್ರಜ್ಞ 'ಸಿ' ಹುದ್ದೆಗೆ ಮಾತ್ರ)
7. ಪ.ಜಾ./ಪ.ಪಂ./ಇ.ಹಿ.ವ.(ಎನ್ ಸಿ ಎಲ್) / ಪಿ.ಡಬ್ಲ್ಯು.ಬಿಡಿ./ಇ.ಡಬ್ಲ್ಯುಎಸ್ ಗೆ ಸಂಬಂಧಿಸಿದ ಅಭ್ಯರ್ಥಿಗಳು ನಿರ್ಧಾರಿತ ನಮೂನೆಯಲ್ಲಿ ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
8. ಇ.ಹಿ.ವ. ವರ್ಗಕ್ಕೆ ಸಂಬಂಧಿಸಿದ ಅಭ್ಯರ್ಥಿಗಳು ದಿನಾಂಕ 01.10.2024 ರಂದು ಅಥವಾ ನಂತರ ನಿರ್ಧಾರಿತ ನಮೂನೆಯಲ್ಲಿ ಸಕ್ಷಮ ಅಧಿಕಾರಿಯವರಿಂದ***ವಿತರಿಸಿದ ಸಮುದಾಯ ಪ್ರಮಾಣಪತ್ರವನ್ನು ಸಲ್ಲಿಸಬೇಕು ಮತ್ತು 2024-25 ಸಾಲಿಗೆ ಸಕ್ಷಮ ಅಧಿಕಾರಿಯವರಿಂದ***ವಿತರಿಸಿದ ಇ.ಡಬ್ಲ್ಯು.ಎಸ್ ಪ್ರಮಾಣಪತ್ರವನ್ನು ಸ್ವೀಕರಿಸಲಾಗುವುದು.(ನಿರ್ಧಾರಿತ ನಮೂನೆಗಳನ್ನು ವೆಬ್ ಸೈಟ್ www.bel-india.in ನಲ್ಲಿ ಒದಗಿಸಲಾಗಿದೆ.)
9. ಬೆಂಚ್ ಮಾರ್ಕ್ ಅಸಮರ್ಥನೀಯ ವ್ಯಕ್ತಿಗಳಿಗೆ – ಪಿ.ಡಬ್ಲ್ಯು.ಬಿಡಿ ಅಭ್ಯರ್ಥಿಗಳು ೪೦% ಕ್ಕಿಂತ ಕಡಿಮೆ ಇರಬಾರದು. ಸಡಿಲಿಕೆ ಹಿತಲಾಭವನ್ನು ಪಡೆಯಲು ಇಚ್ಛಿಸುವ ವ್ಯಕ್ತಿಯು, ಸಕ್ಷಮ ಪ್ರಾಧಿಕಾರರಿಂದ ಜಾರಿಗೊಳಿಸಿದ ಅಸಮರ್ಥನೀಯತೆ ಪ್ರಮಾಣಪತ್ರವನ್ನು ಸಲ್ಲಿಸಬೇಕು .
10. ಬೆಂಚ್ ಮಾರ್ಕ್ ಅಸಮರ್ಥನೀಯತೆ ವ್ಯಕ್ತಿಗಳಿಗೆ (ಪಿಡಬ್ಲ್ಯೂ ಬಿಡಿ) ಆರ್ ಪಿ ಡಬ್ಲ್ಯೂ ಡಿ ಕಾಯ್ದೆ ೨೦೧೬ ರ ಕಲಮ್ 2 (ಆರ್) 2016 ರಲ್ಲಿ ಸೂಚಿಸಿದಂತೆ ಬರಹಗಾರರ ಸೌಲಭ್ಯವನ್ನು ಅನುಮತಿಸಲಾಗುವುದು. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಿಂದ ತಾವೇ ಬರಹಗಾರರ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.

11. ಸರ್ಕಾರ ಆರೋಗ್ಯ ಸಂಸ್ಥೆಯ ಮುಖ್ಯ ವೈದ್ಯಾಧಿಕಾರಿ / ಸಿವಿಲ್ ಸರ್ಜನ್ / ವೈದ್ಯಕೀಯ ಸೂಪರಿಂಟೆಂಡೆಂಟ್ ಅವರಿಂದ ಸಂಬಂಧಪಟ್ಟ ಅಭ್ಯರ್ಥಿಯ ಬರೆಯುವ ಸಾಮರ್ಥ್ಯ ಸೀಮಿತಗೊಂಡಿರುವ ಪರವಾಗಿ ಹಾಗೂ ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಬರಹಗಾರರ ಸೌಲಭ್ಯದ ಆವಶ್ಯಕತೆ ಇದೆ ಎಂಬುದನ್ನು ತಿಳಿಸಿ, ಬಿಇಎಲ್ ವೆಬ್ ಸೈಟ್ ನಲ್ಲಿ ಲಭ್ಯವಿರುವ ನಮೂನೆಯಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಿದ್ದಲ್ಲಿ ಮಾತ್ರ ಅನುಮತಿಸಲಾಗುವುದು.

12. ಅಭ್ಯರ್ಥಿಯು ತೆಗೆದುಕೊಳ್ಳುವ ಪರೀಕ್ಷೆಗಾಗಿ ಉಪಯೋಗಿಸಿಕೊಳ್ಳಲು ಇಚ್ಛಿಸುವ ಬರಹಗಾರರ ವಿದ್ಯಾರ್ಹತೆಯು ಅಭ್ಯರ್ಥಿಯ ವಿದ್ಯಾರ್ಹತೆಗಿಂತ ಒಂದು ಮಟ್ಟ ಕಡಿಮೆ ಇರತಕ್ಕದ್ದು ಮತ್ತು ಅವರು ಬಿಇಎಲ್ ವೆಬ್ ಸೈಟ್ ನಲ್ಲಿ ಲಭಿಸಿರುವ ನಮೂನೆಯ ಪ್ರಕಾರ ಬರಹಗಾರರ ವಿವರಗಳನ್ನು ಸಲ್ಲಿಸತಕ್ಕದ್ದು ಮತ್ತು ಅದನ್ನು ಗೆಜೆಟೆ ಅಧಿಕಾರಿಯವರಿಂದ ಪ್ರಮಾಣೀಕೃತಗೊಳಿಸಿರತಕ್ಕದ್ದು. ಅಭ್ಯರ್ಥಿಯು ಕಂಪ್ಯೂಟರ್ ಆಧಾರಿತ ಪರೀಕ್ಷೆಗೆ ಹಾಜರಾಗುವಾಗ ತಮ್ಮ ಬಳಿ ಸಹಿಯಾದ / ಪ್ರಮಾಣೀಕೃತ ನಮೂನೆಯನ್ನು ಹೊಂದಿರತಕ್ಕದ್ದು.

13 40% ಕ್ಕಿಂತ ಕಡಿಮೆ ಇಲ್ಲದ ಸಂಗತ ಅಸಮರ್ಥನೀಯತೆ ಹೊಂದಿರುವ ಅಭ್ಯರ್ಥಿಗಳು ಮಾತ್ರ ಪಿಡಬ್ಲ್ಯೂ ಬಿಡಿ ಆಗಿ ಮೀಸಲಾತಿ ಮತ್ತು ಸಡಿಲಿಕೆಗೆ ಅರ್ಹರಿರುತ್ತಾರೆ. ಅಸಮರ್ಥನೀಯತೆ ಪ್ರಮಾಣಪತ್ರವನ್ನು ವೈದ್ಯಕೀಯ ಮಂಡಲಿಯಿಂದ ನಿಗದಿತ ನಮೂನೆಯಲ್ಲಿ ಜಾರಿಗೊಳಿಸಿರಬೇಕು. ( ನಿಗದಿತ ನಮೂನೆಯನ್ನು ವೆಬ್ ಸೈಟ್ www.bel-india.in ನಲ್ಲಿ ಲಭಿಸಲು ವ್ಯವಸ್ಥೆ ಮಾಡಲಾಗಿದೆ.

14. ಪ್ರಸ್ತುತ ನೇಮಕಮಾಡಿಕೊಂಡವರಿಂದ ಆಕ್ಷೇಪಣಾ ರಹಿತ ಪ್ರಮಾಣಪತ್ರ (ಸರ್ಕಾರಿ / ಅರೆ ಸರ್ಕಾರಿ/ ಪಿ ಎಸ್ ಯು ನಲ್ಲಿ ನೇಮಕಗೊಂಡಲ್ಲಿ) ಅನ್ವಯಿಸಿದ್ದಲ್ಲಿ ಲಗತ್ತಿಸತಕ್ಕದ್ದು.

15. ಈ ಮೇಲಿನ ಹುದ್ದೆಗಾಗಿ ಅರ್ಜಿ ಸಲ್ಲಿಸುವ ಮಾಜಿ ಸೈನಿಕರು ಭಾರತೀಯ ರಕ್ಷಣಾ ಪಡೆಯಿಂದ (ಭೂಸೇನೆ / ನೌಕಾ ಪಡೆ / ವಾಯು ಸೇನೆ) ನೀಡಲಾದ ಡಿಸ್ಚಾರ್ಜ್ ಪುಸ್ತಕವನ್ನು ಸಲ್ಲಿಸತಕ್ಕದ್ದು.

16. ಕರ್ನಾಟಕ ರಾಜ್ಯದ ಉದ್ಯೋಗ ವಿನಿಮಯದಲ್ಲಿನ ಮಾನ್ಯ ಉದ್ಯೋಗ ನೋಂದಣಿ ಕಾರ್ಡ್. ಉದ್ಯೋಗ ವಿನಿಮಯ ನೋಂದಣಿಯು 04.11.2025 ರಂದು ಮಾನ್ಯ ಮತ್ತು ಸಕ್ರಿಯ ಸ್ಥಿತಿಯಲ್ಲಿರತಕ್ಕದ್ದು.

ಹುದ್ದೆಗೆ ಅರ್ಜಿಸಲ್ಲಿಸಲು https://jobapply.in/BEL2025BNGEATTech ಲಿಂಕ್ ಮೇಲೆ ಕ್ಲಿಕ್ ಮಾಡಿ.

ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **04.11.2025**

ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವಿಕೆಗೆ ಸಂಬಂಧಿಸಿದಂತೆ, ಜಾಹೀರಾತು, ಅರ್ಜಿ ಶುಲ್ಕ ಪಾವತಿ ಮತ್ತು ತಾಂತ್ರಿಕ ನೆರವಿಗಾಗಿ ಸಂಬಂಧಪಟ್ಟ ಪ್ರಶ್ನೆಗಳಿಗಾಗಿ ದಯವಿಟ್ಟು belbng@jobapply.in ಗೆ ಇ-ಮೇಲ್ ಮುಖೇನ ನಮ್ಮನ್ನು ಸಂಪರ್ಕಿಸಿ.

---

*** ಈ ಕೆಳಕಂಡ ಯಾವುದೇ ಪ್ರಾಧಿಕಾರಿಗಳಿಂದ ನಿರ್ಧಾರಿತ ಪ್ರಪತ್ರದಲ್ಲಿ ಜಾರಿಯಾಗಿರುವ ಇ.ಹಿ.ವರ್ಗದ ಪ್ರಮಾಣಪತ್ರ (ಮೇಲ್ಪದರ ವರ್ಗ ರಹಿತ) ಮತ್ತು ಇ.ಡಬ್ಲ್ಯು.ಎಸ್ ಗೆ ಆದಾಯ ಮತ್ತು ಆಸ್ತಿ ಪ್ರಮಾಣ ಪತ್ರವು ಇ.ಹಿ.ವ/ ಇ.ಡಬ್ಲ್ಯು.ಎಸ್ ವರ್ಗದ ಅಭ್ಯರ್ಥಿಗಳ ಪ್ರಮಾಣವಾಗಿ ಸ್ವೀಕರಿಸಲಾಗುತ್ತದೆ.

i. ಜಿಲ್ಲಾ ಮ್ಯಾಜಿ ಸ್ಟ್ರೇಟ್ / ಪೂರಕ ಜಿಲ್ಲಾ ಮ್ಯಾಜಿ ಸ್ಟ್ರೇಟ್/ ಕಲೆಕ್ಟರ್ / ಉಪ ಕಮಿಷ್ ನರ್ / ಪೂರಕ ಉಪ ಕಮಿಷ್ ನರ್/ ಪ್ರಥಮಶ್ರೇಣಿ ಸ್ಟೈಪೆಂಡರಿ ಮ್ಯಾಜಿ ಸ್ಟ್ರೇಟ್ / ಸಬ್ ಡಿವಿಶನಲ್ ಮ್ಯಾಜಿ ಸ್ಟ್ರೇಟ್ / ತಾಲೂಕು ಮ್ಯಾಜಿ ಸ್ಟ್ರೇಟ್ / ಎಕ್ಸಿಕ್ಯೂಟಿವ್ ಮ್ಯಾಜಿ ಸ್ಟ್ರೇಟ್ / ಎಕ್ಸ್ಟ್ರಾಅಸಿಸ್ಟೆಂಟ್ ಕಮಿಷ್ನರ್

ii. *ಚೀಫ್ ಪ್ರೇಸಿಡೆನ್ಸಿ ಮ್ಯಾಜಿ ಸ್ಟ್ರೇಟ್ /ಅಡಿಶನಲ್ ಚೀಫ್ ಪ್ರೇಸಿಡೆನ್ಸಿ ಮ್ಯಾಜಿ ಸ್ಟ್ರೇಟ್ / ಪ್ರೇಸಿಡೆನ್ಸಿ ಮ್ಯಾಜಿ ಸ್ಟ್ರೇಟ್*

iii. *ಚೀಫ್ ಪ್ರೇಸಿಡೆನ್ಸಿ ಮ್ಯಾಜಿ ಸ್ಟ್ರೇಟ್ /ಅಡಿಶನಲ್ ಚೀಫ್ ಪ್ರೇಸಿಡೆನ್ಸಿ ಮ್ಯಾಜಿ ಸ್ಟ್ರೇಟ್ / ಪ್ರೇಸಿಡೆನ್ಸಿ ಮ್ಯಾಜಿ ಸ್ಟ್ರೇಟ್*

iv. *ಅಭ್ಯರ್ಥಿ ಹಾಗೂ/ ಅಥವ ಆವರ ಕುಟುಂಬವೂ ಸಾಮಾನ್ಯವಾಗಿ ವಾಸಿಸುವ ಸ್ಥಳದ ಉಪ ವಿಭಾಗಾಧಿಕಾರಿ*